2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 118/2016</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಅಶ್ವಿನ್ ಕುಮಾರ್ | | ಪಿಡಬ್ಲೂ - 14 |
| ತಂದೆಯ ಹೆಸರು | - ಚಂದ್ರಶೇಖರ್ | | ಸಿಡಬ್ಲೂ - 25 |
| ವಯಸ್ಸು | - 40 ವರ್ಷ | | |
| ಉದ್ಯೋಗ | - ಪೊಲೀಸ್ ನಿರೀಕ್ಷಕರು | | |
| ವಾಸ ಸ್ಥಳ | - ತುಮಕೂರು | | |

(ಈ ದಿನ 1, 3 ಮತ್ತು 4 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಿದ್ದು 1, 3 ಮತ್ತು 4 ನೇ ಆರೋಪಿತರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು 1, 3 ಮತ್ತು 4 ನೇ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ ಹಾಗಾಗಿ ಸದರಿ ಆರೋಪಿತರ ಗೈರು ಹಾಜರಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ನಡೆಸಲಾಯಿತು.)

ದಿನಾಂಕಃ **29.11.2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ನಾನು ದಿನಾಂಕಃ 30.10.2014 ರಿಂದ ದಿನಾಂಕ 18.07.2016 ರವರೆಗೆ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 13.10.2015 ರಂದು ನಾನು ಠಾಣೆಯಲ್ಲಿದ್ದ ಸಮಯದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಾಸಿವೆಹಳ್ಳಿ ಗ್ರಾಮದ ವಾಸಿ ಚಂದ್ರಶೇಖರ್ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆಃ **278/2015** ರಲ್ಲಿ ಐಪಿಸಿ ಕಲಂ **392, 448** ರೀತಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

3. ಸದರಿ ದೂರಿನ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ.26 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿದ್ದ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.27 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.26 ರವರಿಗೆ ಹಸ್ತಾಂತರಿಸಿರುತ್ತೇನೆ.

4. ದಿನಾಂಕ 06.11.2015 ರಂದು ಚಾಸಾ.26 ರವರು ನನಗೆ ಜ್ಞಾಪನವನ್ನು ನೀಡಿ ಹೊನ್ನಾಳಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 278/2015 ರಲ್ಲಿನ ಆರೋಪಿಗಳನ್ನು ಮತ್ತು ಮಾಲನ್ನು ಪತ್ತೆ ಹಚ್ಚಲು ಸೂಚಿಸಿದ್ದರು. ಅದರ ಮೇರೆಗೆ

ಅದೇ ದಿನ ಅಂದರೆ ದಿನಾಂಕ 06.11.2015 ರಂದು ಠಾಣಾ ಸಿಬ್ಬಂದಿಗಳಾದ ಚಾಸಾ.19 ರಾಜಶೇಖರ್, ಚಾಸಾ.20 ನಾಗಭೂಷಣ್, ಚಾಸಾ.21 ಫೈರೋಜ್ ಖಾನ್, ಚಾಸಾ.22 ವೆಂಕಟರಮಣ ಮತ್ತು ಚಾಸಾ.23 ಸಂತೋಷ್ ರವರೊಂದಿಗೆ ಇಲಾಖಾ ಜೀಪಿನಲ್ಲಿ ಠಾಣೆಯಿಂದ ಹೊರಟು ಗೊಲ್ಲರಹಳ್ಳಿ, ಬೆನಕನಹಳ್ಳಿ, ಸಾಸ್ವೆಹಳ್ಳಿ ಗ್ರಾಮಗಳಲ್ಲಿ ಗಸ್ತು ಮಾಡಿ, ಬೆಳಗಿನ ಜಾವ 4.00 ಗಂಟೆ ಸಮಯದಲ್ಲಿ ಸಾಸ್ವೆಹಳ್ಳಿಯ ಹತ್ತಿರ ಕುಳಗಟ್ಟೆ ಕ್ರಾಸ್ ನಲ್ಲಿ ಇದ್ದ ಸಮಯದಲ್ಲಿ ಹೊಳೆಹೊನ್ನೂರು ಕಡೆಯಿಂದ ಒಂದು ವಾಹನ ಬರುತ್ತಿದ್ದು, ಅದನ್ನು ತಡೆದು ನಿಲ್ಲಿಸಿ ಪರಿಶೀಲಿಸಲಾಗಿ ಸದರಿ ವಾಹನವು ಕೆ ಎ 17 ಬಿ 6860 ನೋಂದಣಿ ಸಂಖ್ಯೆಯುಳ್ಳ ಎರಿಟಿಗಾ ಕಾರಾಗಿದ್ದು ಸದರಿ ವಾಹನದಲ್ಲಿ ಮನು, ಮಂಜುನಾಥ, ಅಜಯ್, ಬೆನಕೇಶ ಮತ್ತು ಶ್ರೀಧರ್ ಎಂಬ ವ್ಯಕ್ತಿಗಳು ಇದ್ದು, ಸದರಿ ವ್ಯಕ್ತಿಗಳನ್ನು ವಿಚಾರಿಸಲಾಗಿ ಅವರು ನಮ್ಮ ಠಾಣೆಯ ಮೊಕದ್ದಮೆ ಸಂಖ್ಯೆ 278/2015 ರಲ್ಲಿ ಶಾಮೀಲಾಗಿರುವುದಾಗಿ ಕಂಡು ಬಂದಿದ್ದರಿಂದ ಆ ವಿಚಾರವನ್ನು ಠಾಣೆಗೆ ತಿಳಿಸಿ ಠಾಣೆಯಲ್ಲಿದ್ದ ಸಿಬ್ಬಂದಿ ಭೋಜಪ್ಪರವರ ಮುಖಾಂತರ ಚಾಸಾ.14 ರಾಜು ಮತ್ತು ಚಾಸಾ.15 ಲಿಂಗರಾಜುರವರನ್ನು ಪಂಚರನ್ನಾಗಿ ಸ್ಥಳಕ್ಕೆ ಕರೆಸಿಕೊಂಡು ಅವರಿಗೆ ನೋಟೀಸನ್ನು ಜಾರಿ ಮಾಡಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡ ಮೇರೆಗೆ ಅವರು ಒಪ್ಪಿಕೊಂಡಿರುತ್ತಾರೆ. ಅದರಂತೆ ಚಾಸಾ.14 ಮತ್ತು

ಚಾಸಾ.15 ರವರ ಸಮಕ್ಷಮ ದಿನಾಂಕ 07.11.2015 ರಂದು ಬೆಳಿಗ್ಗೆ 4.45 ಗಂಟೆಯಿಂದ 6.00 ಗಂಟೆಯವರೆಗೆ ಕುಳಗಟ್ಟೆ ಕ್ರಾಸ್ ನಲ್ಲಿರುವ ಬಸ್ ನಿಲ್ದಾಣದ ಕಟ್ಟಡದ ಮುಂಭಾಗದ ರಸ್ತೆಯಲ್ಲಿ ಪಂಚನಾಮೆಯನ್ನು ಜರುಗಿಸಿ ಮೇಲೆ ತಿಳಿಸಿದ ಪಂಚರ ಸಮಕ್ಷಮ ಮೇಲೆ ತಿಳಿಸಿದ ವ್ಯಕ್ತಿಗಳ ಅಂಗಶೋಧನೆಯನ್ನು ಮಾಡಲಾಗಿ ಮನು @ ಡಿ.ಕೆ ಮನು ಎಂಬಾತನ ಜೇಬಿನಲ್ಲಿ ಒಂದು ಚೀಟಿ ದೊರೆತಿರುತ್ತದೆ. ಸದರಿ ಚೀಟಿಯು ಹರೀಶ ಎಂಬ ವ್ಯಕ್ತಿಯ ಹೆಸರಿನಲ್ಲಿ ತೀರ್ಥಹಳ್ಳಿ ಮಣಪ್ಪುರಂ ಫೈನಾನ್ಸ್ ನಲ್ಲಿ 54 ಗ್ರಾಂ ತೂಕದ ಒಂದು ಬಂಗಾರದ ಚೈನ್ ಮತ್ತು 2 ಚಿನ್ನದ ಬಳೆಗಳನ್ನು 98,000/- ರೂಪಾಯಿಗಳಿಗೆ ಅಡವಿಟ್ಟ ಬಗ್ಗೆ ರಶೀದಿಯಾಗಿರುತ್ತದೆ. ನಂತರ ಬೆನಕೇಶನ ಬಳಿ ಒಂದು ಕಪ್ಪು ಬಣ್ಣದ ಕಾರ್ಬನ್ ಮೊಬೈಲ್ ದೊರೆತಿರುತ್ತದೆ. ನಂತರ ವಾಹನವನ್ನು ಪರಿಶೀಲಿಸಲಾಗಿ ಅದರ ಡಿಕ್ಕಿಯಲ್ಲಿ 2 ವರೆ ಅಡಿ ಉದ್ದದ ಪ್ಲಾಸ್ಟಿಕ್ ಹಿಡಿ ಇರುವ ಒಂದು ಲಾಂಗು, ಮೂರು ಮಂಕಿ ಕ್ಯಾಪ್ ಗಳು, ಮೂರು ಜೊತೆ ಬಿಳಿ ಬಣ್ಣದ ಹ್ಯಾಂಡ್ ಗ್ಲೌಸುಗಳು ದೊರೆತಿರುತ್ತವೆ. ನಂತರ ಮೇಲೆ ತಿಳಿಸಿದ ಕೆ ಎ 17 ಬಿ 6860 ನೋಂದಣಿ ಸಂಖ್ಯೆಯುಳ್ಳ ಎರಿಟಿಗಾ ಕಾರು ಮತ್ತು ಮೇಲೆ ತಿಳಿಸಿದ ಆರೋಪಿತರಿಂದ ದೊರೆತ ಮಾಲು ಮತ್ತು ರಶೀದಿಯನ್ನು ಮೇಲೆ ತಿಳಿಸಿದ ಪಂಚರ ಸಮಕ್ಷಮ ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡಿರುತ್ತೇನೆ.

5. ಸದರಿ ಪಂಚನಾಮೆಯ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.18 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.18(ಸಿ) ಎಂದು ಗುರುತಿಸಲಾಯಿತು. ನಂತರ ಬೆಳಿಗ್ಗೆ ಅಂದರೆ ದಿನಾಂಕ 07.11.2015 ರಂದು ಠಾಣೆಗೆ ಹಿಂದಿರುಗಿ ಚಾಸಾ.26 ರವರಿಗೆ ವಶಕ್ಕೆ ಪಡೆದಿದ್ದ ಆರೋಪಿತರು, ವಸ್ತುಗಳು ಮತ್ತು ಕಾರನ್ನು ಹಾಜರುಪಡಿಸಿ ಆ ಬಗ್ಗೆ ವರದಿ ನೀಡಿರುತ್ತೇನೆ. ಸದರಿ ವರದಿಯ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ.28 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು.

6. ಆ ದಿನ 1 ನೇ ಆರೋಪಿ ಮನು ರವರ ಜೇಬಿನಲ್ಲಿದ್ದ ರಶೀದಿಯ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ.29 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು. ನಿಪಿ.18 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ಲಾಂಗನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಲಾಂಗನ್ನು ನೋಡಿ ಗುರುತಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ.26 ರವರಿಗೆ ದಿನಾಂಕ 08.11.2015 ರಂದು ಹೇಳಿಕೆಯನ್ನು ನೀಡಿದ್ದೇನೆ.

7. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 2, 5 ಮತ್ತು 6 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ ಮತ್ತು ಉಳಿದ ಆರೋಪಿತರನ್ನು ನೋಡಿದರೆ ಗುರುತಿಸುವುದಾಗಿ ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಹೆಚ್ ಎ ಟಿ ವಕೀಲರಿಂದ **1** ರಿಂದ **5** ನೇ ಆರೋಪಿತರ ಪರವಾಗಿಃ</u>

8. ಈ ಪ್ರಕರಣದ ತನಿಖಾಧಿಕಾರಿಗಳಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ. ಈ ಪ್ರಕರಣದಲ್ಲಿ ನೀವು ಯಾವುದೇ ತನಿಖೆಯನ್ನು ಮಾಡಿಲ್ಲ ಎಂದರೆ ಸಾಕ್ಷಿ ಹೊನ್ನಾಳಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ **278/2015** ರಲ್ಲಿ ತನಿಖೆಯನ್ನು ಮಾಡುವ ಸಮಯದಲ್ಲಿ ಈ ಪ್ರಕರಣದಲ್ಲಿ ಆರೋಪಿತರು ಭಾಗಿಯಾಗಿರುವುದು ಕಂಡು ಬಂದಿರುತ್ತದೆ ಎನ್ನುತ್ತಾರೆ.

9. ನಿಪಿ.28 ರ ವರದಿಯಲ್ಲಿ ನೀವು ಬಂಧಿಸಿದ್ದೀರಿ ಎಂದು ಹೇಳಲಾದ ಆರೋಪಿತರು ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಇತರೆ ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ತಿಳಿಸಿದ್ದೇನೆ ಎನ್ನುತ್ತಾರೆ.

10. ಈ ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ ನಿರ್ದಿಷ್ಟವಾಗಿ ನಿಪಿ.28 ರಲ್ಲಿ ತಿಳಿಸಿಲ್ಲ ಎಂದರೆ ಸರಿ. ಮು.ಮಾ.1 ರ

ವಿವರಗಳನ್ನು ನಿಪಿ.28 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಂತೆ ಗುರುತಿಸಲ್ಪಟ್ಟಿರುವ ಆಯುಧ 2 ವರೆ ಅಡಿಗಿಂತ ಉದ್ದವಿದೆ ಎಂದರೆ ಗೊತ್ತಿಲ್ಲ.

11. 1 ನೇ ಆರೋಪಿಯ ಜೇಬಿನಲ್ಲಿ ನಿಪಿ.29 ರಶೀದಿ ದೊರೆಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.28 ರಲ್ಲಿ ಸದರಿ ರಶೀದಿಯ ವಿವರಗಳು ಮತ್ತು ಯಾವ ದಿನಾಂಕದಂದು ಒಡವೆಗಳನ್ನು ಅಡ ಇಡಲಾಯಿತು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಮೂರು ಮಂಕಿಕ್ಯಾಪ್ ಗಳು, ಮೂರು ಜೊತೆ ಹ್ಯಾಂಡ್ ಗ್ಲೌಸುಗಳು, ಎರಿಟಿಗಾ ಕಾರು ಮತ್ತು ಮು.ಮಾ.1 ನ್ನು ನಿಪಿ.18 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

12. ದಿನಾಂಕ 06.11.2015 ರಂದು ಚಾಸಾ.26 ರವರು ನಿಮಗೆ ಜ್ಞಾಪನಾವನ್ನು ನೀಡಿ ಹೊನ್ನಾಳಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 278/2015 ರಲ್ಲಿನ ಆರೋಪಿಗಳನ್ನು ಮತ್ತು ಮಾಲನ್ನು ಪತ್ತೆ ಹಚ್ಚಲು ಸೂಚಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದರ ಮೇರೆಗೆ ಅದೇ ದಿನ ಅಂದರೆ ದಿನಾಂಕ 06.11.2015 ರಂದು ಠಾಣಾ ಸಿಬ್ಬಂದಿಗಳಾದ ಚಾಸಾ.19 ರಾಜಶೇಖರ್, ಚಾಸಾ.20 ನಾಗಭೂಷಣ್, ಚಾಸಾ.21 ಫೈರೋಜ್ ಖಾನ್, ಚಾಸಾ.22

ವೆಂಕಟರಮಣ ಮತ್ತು ಚಾಸಾ.23 ಸಂತೋಷ್ ರವರೊಂದಿಗೆ ಇಲಾಖಾ ಜೀಪಿನಲ್ಲಿ ಠಾಣೆಯಿಂದ ಹೊರಟು ಗೊಲ್ಲರಹಳ್ಳಿ, ಬೆನಕನಹಳ್ಳಿ, ಸಾಸ್ವೆಹಳ್ಳಿ ಗ್ರಾಮಗಳಲ್ಲಿ ಗಸ್ತು ಮಾಡಿ, ಬೆಳಗಿನ ಜಾವ 4.00 ಗಂಟೆ ಸಮಯದಲ್ಲಿ ಸಾಸ್ವೆಹಳ್ಳಿ ಯ ಹತ್ತಿರ ಕುಳಗಟ್ಟೆ ಕ್ರಾಸ್ ನಲ್ಲಿ ಇದ್ದುದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಹೊಳೆಹೊನ್ನೂರು ಕಡೆಯಿಂದ ಒಂದು ವಾಹನ ಬರುತ್ತಿದ್ದಾಗಿ, ಅದನ್ನು ತಡೆದು ನಿಲ್ಲಿಸಿ ಪರಿಶೀಲಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ವಾಹನವು ಕೆ ಎ 17 ಬಿ 6860 ನೋಂದಣಿ ಸಂಖ್ಯೆಯುಳ್ಳ ಎರಿಟಿಗಾ ಕಾರಾಗಿದ್ದು ಸದರಿ ವಾಹನದಲ್ಲಿ ಮನು, ಮಂಜುನಾಥ, ಅಜಯ್, ಬೆನಕೇಶ ಮತ್ತು ಶ್ರೀಧರ್ ಎಂಬ ವ್ಯಕ್ತಿಗಳು ಇದ್ದು, ಸದರಿ ವ್ಯಕ್ತಿಗಳನ್ನು ವಿಚಾರಿಸಲಾಗಿ ಅವರು ನಿಮ್ಮ ಠಾಣೆಯ ಮೊಕದ್ದಮೆ ಸಂಖ್ಯೆ278/2015 ರಲ್ಲಿ ಶಾಮೀಲಾಗಿರುವುದಾಗಿ ಕಂಡು ಬಂದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ವಿಚಾರವನ್ನು ಠಾಣೆಗೆ ತಿಳಿಸಿ ಠಾಣೆಯಲ್ಲಿದ್ದ ಸಿಬ್ಬಂದಿ ಭೋಜಪ್ಪರವರ ಮುಖಾಂತರ ಚಾಸಾ.14 ರಾಜು ಮತ್ತು ಚಾಸಾ.15 ಲಿಂಗರಾಜುರವರನ್ನು ಪಂಚರನ್ನಾಗಿ ಸ್ಥಳಕ್ಕೆ ಕರೆಸಿಕೊಂಡಿದ್ದಾಗಿ, ಅವರಿಗೆ ನೋಟೀಸನ್ನು ಜಾರಿ ಮಾಡಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದಾಗಿ, ಅದಕ್ಕೆ ಅವರು ಒಪ್ಪಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದರಂತೆ

ಚಾಸಾ.14 ಮತ್ತು ಚಾಸಾ.15 ರವರ ಸಮಕ್ಷಮ ಬೆಳಿಗ್ಗೆ 4.45 ಗಂಟೆಯಿಂದ 6.00 ಗಂಟೆಯವರೆಗೆ ಕುಳಗಟ್ಟೆ ಕ್ರಾಸ್ ನಲ್ಲಿರುವ ಬಸ್ ನಿಲ್ದಾಣದ ಕಟ್ಟಡದ ಮುಂಭಾಗದ ರಸ್ತೆಯಲ್ಲಿ ಪಂಚನಾಮೆಯನ್ನು ಜರುಗಿಸಿದ್ದಾಗಿ, ಮೇಲೆ ತಿಳಿಸಿದ ಪಂಚರ ಸಮಕ್ಷಮ ಮೇಲೆ ತಿಳಿಸಿದ ವ್ಯಕ್ತಿಗಳ ಅಂಗಶೋಧನೆಯನ್ನು ಮಾಡಲಾಗಿ ಮನು @ ಡಿ.ಕೆ ಮನು ಎಂಬಾತನ ಜೇಬಿನಲ್ಲಿ ಒಂದು ಚೀಟಿ ದೊರೆತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಚೀಟಿಯು ಹರೀಶ ಎಂಬ ವ್ಯಕ್ತಿಯ ಹೆಸರಿನಲ್ಲಿ ತೀರ್ಥಹಳ್ಳಿ ಮಣಪ್ಪುರಂ ಫೈನಾನ್ಸ್ ನಲ್ಲಿ 54 ಗ್ರಾಂ ತೂಕದ ಒಂದು ಬಂಗಾರದ ಚೈನ್ ಮತ್ತು 2 ಚಿನ್ನದ ಬಳೆಗಳನ್ನು 98,000/-ರೂಪಾಯಿಗಳಿಗೆ ಅಡವಿಟ್ಟ ಬಗ್ಗೆ ರಶೀದಿಯಾಗಿರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಬೆನಕೇಶನ ಬಳಿ ಒಂದು ಕಪ್ಪು ಬಣ್ಣದ ಕಾರ್ಬನ್ ಮೊಬೈಲ್ ದೊರೆತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ವಾಹನವನ್ನು ಪರಿಶೀಲಿಸಲಾಗಿ ಅದರ ಡಿಕ್ಕಿಯಲ್ಲಿ 2 ವರೆ ಅಡಿ ಉದ್ದದ ಪ್ಲಾಸ್ಟಿಕ್ ಹಿಡಿ ಇರುವ ಒಂದು ಲಾಂಗು, ಮೂರು ಮಂಕಿ ಕ್ಯಾಪ್ ಗಳು, ಮೂರು ಜೊತೆ ಬಿಳಿ ಬಣ್ಣದ ಹ್ಯಾಂಡ್ ಗ್ಲೌಸುಗಳು ದೊರೆತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಕೆ ಎ 17 ಬಿ 6860 ನೋಂದಣಿ ಸಂಖ್ಯೆಯುಳ್ಳ ಎರಿಟಿಗಾ ಕಾರು ಮತ್ತು ಆರೋಪಿತರಿಂದ ದೊರೆತ ಮಾಲು ಮತ್ತು ರಶೀದಿಯನ್ನು

ಪಂಚರ ಸಮಕ್ಷಮ ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ನಂತರ ಬೆಳಿಗ್ಗೆ ಅಂದರೆ ದಿನಾಂಕ 07.11.2015 ರಂದು ಠಾಣೆಗೆ ಹಿಂದಿರುಗಿ ಚಾಸಾ.26 ರವರಿಗೆ ವಶಕ್ಕೆ ಪಡೆದಿದ್ದ ಆರೋಪಿತರು, ವಸ್ತುಗಳು ಮತ್ತು ಕಾರನ್ನು ಹಾಜರುಪಡಿಸಿ ಆ ಬಗ್ಗೆ ನಿಪಿ.28 ರಂತೆ ವರದಿ ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

14. ನಿಪಿ.18 ರ ಒಂದನೇ ಪುಟ ಮತ್ತು ಮೂರನೇ ಪುಟದಲ್ಲಿ ನಮೂದಿಸಿರುವ ಸಮಯದ ಬರವಣಿಗೆ ಮತ್ತು ಶಾಹಿಯಲ್ಲಿ ಮತ್ತು ಉಳಿದಂತೆ ನಿಪಿ.18 ರಲ್ಲಿ ಮಾಡಿರುವ ಬರವಣಿಗೆಯಲ್ಲಿ ಮತ್ತು ಶಾಹಿಯಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿಪಿ.18 ರ ಪಂಚಾಯ್ತುದಾರರು ಸ್ಥಳೀಯರಲ್ಲ ಎಂದರೆ ಸಾಕ್ಷಿ ಅವರು ಹೊನ್ನಾಳಿ ನಗರದವರಾಗಿದ್ದು ಅದೇ ತಾಲ್ಲೂಕಿನವರಾಗಿರುತ್ತಾರೆ ಎನ್ನುತ್ತಾರೆ. ಪಂಚಾಯ್ತುದಾರರನ್ನು ಸ್ಥಳಕ್ಕೆ ಕರೆಯಿಸಿ ಸ್ಥಳದಲ್ಲಿಯೇ ನೋಟೀಸನ್ನು ಜಾರಿಮಾಡಿರುತ್ತೇನೆ. ಹೊನ್ನಾಳಿಯಿಂದ ಕುಳಗಟ್ಟೆ ಕ್ರಾಸಿಗೆ ಸುಮಾರು 25 ಕಿಲೋ ಮೀಟರ್ ಅಂತರವಿರಬಹುದು. ಕುಳಗಟ್ಟೆ ಕ್ರಾಸಿನಿಂದ ಹೊನ್ನಾಳಿಗೆ ಹೋಗಲು 25 ರಿಂದ 30 ನಿಮಿಷವಾಗುತ್ತದೆ. ಈ ಪ್ರಕರಣದ

ತನಿಖಾಧಿಕಾರಿಗಳ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **6** ನೇ ಆರೋಪಿ ಪರವಾಗಿ ಶ್ರೀ ಐ ಎಸ್ ಟಿ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ